# ಚೆಸ್‌ನ ದೇಶದ ಮುಖ!


■ ಪ್ರವೀಣ ಕುಲಕರ್ಣಿ

ಮಹಿಳೆಯರ ಫಿಡೆ ಚೆಸ್‌ನಲ್ಲಿ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿರುವ ದಿವ್ಯಾ ದೇಶಮುಖ್ ಈಗ ಚೆಸ್‌ನಲ್ಲಿ ದೇಶದ ಮುಖವಾಗಿದ್ದಾಳೆ. ಭಾರತದ ಯಾವೊಬ್ಬ ಮಹಿಳೆಯೂ ಇದುವರೆಗೆ ಮಾಡದಿರುವ ಸಾಧನೆಯು ದಿವ್ಯಾಳಿಂದ ಮೂಡಿಬಂದಿದೆ. ಅವಳ ಈ ಸಾಧನೆಗೆ ಭಾರತೀಯ ಕ್ರೀಡಾರಂಗದಲ್ಲಿ, ವಿಶೇಷವಾಗಿ ಚೆಸ್ ಕ್ರೀಡೆಯಲ್ಲಿ, ಬಲುದೊಡ್ಡ ಮಹತ್ವವಿದೆ. ಕ್ರೀಡೆಯಲ್ಲಿ ಲಿಂಗ ತಾರತಮ್ಯದ ಕುರಿತು ಮೊದಲಿನಿಂದಲೂ ದೂರುಗಳು ಇದ್ದೇ ಇವೆ. ಚೆಸ್‌ನಲ್ಲಿ ಕೂಡ ಈ ಕೊರಗು ಕಾಡುತ್ತಲೇ ಇದೆ. ಅಂತಹ ದೂರು–ಕೊರಗುಗಳ ಮಧ್ಯೆ ದಿವ್ಯಾ ಮಿಂಚಿನ ಸಂಚಾರ ಮೂಡಿಸಿದ್ದಾಳೆ.

ದೇಶದ ಮಹಿಳಾ ಚೆಸ್ ಸ್ಥಿತಿಗತಿಯ ವಿಷಯವಾಗಿ ಆತಂಕ ವ್ಯಕ್ತಪಡಿಸಿದ್ದ ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕಾ, ಭಾರತದ ಚೆಸ್‌ನಲ್ಲಿ ಪುರುಷರ ವಿಭಾಗದ ಸಾಧನೆ ಮತ್ತು ಮಹಿಳಾ ವಿಭಾಗದ ಸಾಧನೆಯ ನಡುವೆ ದೊಡ್ಡ ಕಂದರ ಏರ್ಪಟ್ಟಿದೆ, ಈ ಅಂತರವನ್ನು ತುಂಬಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದರು. ದಿವ್ಯಾಳ ಸಾಧನೆ ಖಂಡಿತವಾಗಿಯೂ ಆ ಅಂತರವನ್ನು ಕಡಿಮೆ ಮಾಡಿದೆ. ಹೊಸ ತಾರೆಯ ಉಗಮವಾಗಿದೆ ಎಂಬ ಸಂದೇಶವನ್ನೂ ಅದು ಸಾರಿದೆ.

ದಿವ್ಯಾ, ತುಂಬಾ ವೇಗವಾಗಿ ಏರುತ್ತಿರುವ ಎತ್ತರ ಬೆರಗು ಮೂಡಿಸುತ್ತದೆ. ಮಹಾನ್ ಕ್ರೀಡಾ ತಾರೆಗಳಾದ ಮಿಲ್ಖಾ ಸಿಂಗ್ ಮತ್ತು ಮೇರಿ ಕೋಮ್ ಅವರ ಸಿನಿಮಾಗಳ ಹಾಡುಗಳಿಂದ ಸ್ಫೂರ್ತಿ ಪಡೆದಿರುವುದಾಗಿ ಆಕೆ ಹೇಳಿದ್ದಾಳೆ. ಈ ಚೆಸ್ ತಾರೆಗೆ ಈಗಷ್ಟೇ 19ರ ಹರೆಯ. ವಿಶ್ವ ಚಾಂಪಿಯನ್ ಪಟ್ಟವೇರುವ ಜತೆಗೆ ಗ್ರ್ಯಾಂಡ್ ಮಾಸ್ಟರ್ ಆಗಿಯೂ ಹೊರಹೊಮ್ಮಿರುವ ಆಕೆ, ಭಾರತದಲ್ಲಿ ಕ್ರಿಕೆಟ್‌ನಂತೆಯೇ ಚೆಸ್ ಕೂಡ ಬೆಳಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾಳೆ. ಅಂತಹದ್ದೊಂದು ದಿನ ಬಂದೇ ಬರುತ್ತದೆ. ಆ ನಿಟ್ಟಿನಲ್ಲಿ, ನನ್ನ ಗೆಲುವು ಒಂದು ಪುಟ್ಟ ಕಾಣಿಕೆ ಎಂದು ವಿನೀತವಾಗಿ ಹೇಳುತ್ತಾಳೆ.

ದಿವ್ಯಾಳ ಅಪ್ಪ ಜಿತೇಂದ್ರ ದೇಶಮುಖ್ – ಅಮ್ಮ ನಮ್ರತಾ ದೇಶಮುಖ್ ಇಬ್ಬರೂ ವೈದ್ಯರು. ಮಗಳು ಕೂಡ ತಮ್ಮಂತೆಯೇ ವೈದ್ಯೆ ಆಗಬೇಕೆಂದು ಅವರು ಬಯಸಿದ್ದರೇನೋ. ಆದರೆ, ಆಕೆ ಚೆಸ್ ಬೋರ್ಡ್ ಮುಂದೆ ಕುಳಿತಾಗ, ಅವರು ಬೇಡ ಎನ್ನಲಿಲ್ಲ. ವೃತ್ತಿಪರ ಚೆಸ್ ಆಟಗಾರ್ತಿಯೇ ಆಗಲಿ ಬಿಡು, ಏನೀಗ ಎಂದು ಅವಳ ಕ್ರೀಡಾಪ್ರೇಮವನ್ನು ಉತ್ತೇಜಿಸಿದರು. ದಿವ್ಯಾ, ಏಳು ವರ್ಷದವಳಾಗಿದ್ದಾಗ ರಾಷ್ಟ್ರೀಯ ಚಾಂಪಿಯನ್ ಆದಳು. ಮುಂದೆ ಹತ್ತು ವರ್ಷದೊಳಗಿನವರ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದಳು. ಚೆಸ್, ಇತರ ಕ್ರೀಡೆಗಳಂತಲ್ಲ. ಇಲ್ಲಿ ಬುದ್ಧಿಮತ್ತೆ, ಏಕಾಗ್ರತೆ ಮತ್ತು ತಾಳ್ಮೆ ತುಂಬಾ ಮುಖ್ಯ. ಹೊಸ ಕಾಲದ ಈ ಹುಡುಗಿಯಲ್ಲಿ ಆ ಗುಣಗಳೆಲ್ಲ (ಈಗಿನ ಪೀಳಿಗೆಯವರ ಸ್ವಭಾವಕ್ಕೆ ವಿರುದ್ಧವಾಗಿ) ಬಾಲ್ಯದಿಂದಲೇ ಮೈಗೂಡಿದ ಫಲಿತಾಂಶ ಈಗ ನಮ್ಮ ಮುಂದಿದೆ.



ಆಂಧ್ರಪ್ರದೇಶದ ಕೋನೇರು ಹಂಪಿ ಅವರು 2002ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಆದಾಗ ದಿವ್ಯಾ ಇನ್ನೂ ಜನಿಸಿರಲೇ ಇಲ್ಲ. ಬಟುಮಿಯಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅಂತಹ ಮಹಾನ್ ಆಟಗಾರ್ತಿಯನ್ನು ಸೋಲಿಸಿ, ಪ್ರಶಸ್ತಿ ಪಡೆದಿರುವ 'ಜೈಂಟ್ ಕಿಲ್ಲರ್' ದಿವ್ಯಾಳ ಸಾಧನೆಗೆ ವಿಶೇಷ ಮಹತ್ವವಿದೆ. ಫೈನಲ್ ಹಾದಿಯಲ್ಲಿ ಆಕೆ ಘಟಾನುಘಟಿ ಆಟಗಾರ್ತಿಯರನ್ನೇ ಸೋಲಿಸಿದ್ದಳು.

'ನಾನು ಕಳೆದುಕೊಳ್ಳುವುದು ಏನೂ ಇಲ್ಲದ ಕಾರಣ ಕೋನೇರು ಹಂಪಿ ಅವರ ವಿರುದ್ಧ ಯಾವುದೇ ಒತ್ತಡವಿಲ್ಲದೆ ಆಡಿದ್ದೆ' ಎಂದು ನಗುತ್ತಾ ಹೇಳುತ್ತಾಳೆ ದಿವ್ಯಾ. 'ಫಲಿತಾಂಶ ನನ್ನ ಕೈಯಲ್ಲಿಲ್ಲದ ಕಾರಣ ನಾನು ನನ್ನ ಆಟದ ಕಡೆಗಷ್ಟೇ ಗಮನ ಕೇಂದ್ರೀಕರಿಸಿದೆ. ಬೇರೇನೂ ಯೋಚಿಸಿರಲಿಲ್ಲ' ಎನ್ನುತ್ತಾಳೆ ಆಕೆ. ದಿವ್ಯಾಳ ಈ ಮನೋಭಾವವೇ ಆಕೆಯನ್ನು ಒತ್ತಡಮುಕ್ತವಾಗಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದೆ.

'ನನ್ನ ವೃತ್ತಿಜೀವನದಲ್ಲಿ ತಂದೆ–ತಾಯಿ ವಹಿಸಿದ ಪಾತ್ರ ಬಲುದೊಡ್ಡದು. ಅವರ ನೆರವಿಲ್ಲದೇ ಹೋಗಿದ್ದಲ್ಲಿ ನಾನು ಈ ಹಂತಕ್ಕೆ ತಲುಪಲು ಆಗುತ್ತಿರಲಿಲ್ಲ. ನನ್ನ ಕುಟುಂಬ ಮತ್ತು ನನ್ನ ಮೊದಲ ಕೋಚ್ ರಾಹುಲ್ ಜೋಶಿ ಅವರಿಗೆ ಈ ಗೆಲುವಿನ ಶ್ರೇಯ ಸಲ್ಲಬೇಕು. ನಾನು ಗ್ರ್ಯಾಂಡ್‌ಮಾಸ್ಟರ್ ಆಗಬೇಕೆಂದು ಕೋಚ್ ಸದಾ ಹಾರೈಸುತ್ತಿದ್ದರು. ಈ ಗೆಲುವು ಅವರಿಗಾಗಿ' ಎಂದು ದಿವ್ಯಾ ಸ್ಮರಿಸುತ್ತಾಳೆ. 2020ರಲ್ಲಿ ಜೋಶಿ ಅವರು ನಿಧನರಾಗಿದ್ದರು.

ದಿವ್ಯಾ ಅಲ್ಲದೆ, ವೈಶಾಲಿ ಆರ್. (ಪ್ರಜ್ಞಾನಂದ ಅವರ ಅಕ್ಕ), ವಂತಿಕಾ ಅಗರವಾಲ್, ಸವಿತಾಶ್ರೀ ಸಹ ಗಮನ ಸೆಳೆಯುತ್ತಿದ್ದಾರೆ. ಭಾರತ ಮಹಿಳಾ ಚೆಸ್‌ನ ಭವಿಷ್ಯ ಉಜ್ವಲವಾಗಿದೆ ಎಂಬುದನ್ನು ದಿವ್ಯಾ ನಿರೂಪಿಸಿ ತೋರಿಸಿದ್ದಾಳೆ. 2026ರ ಕ್ಯಾಂಡಿಡೇಟ್ಸ್ ಟೂರ್ನಿಗೆ ಹಂಪಿ ಮತ್ತು ದಿವ್ಯಾ ಅರ್ಹತೆ ಪಡೆದಿದ್ದಾರೆ. ಹೊಸ ಭರವಸೆಗಳು ಹರಳುಗಟ್ಟಿವೆ. ಚೆಸ್ ಎಂದರೆ ದೇಶದ ಜನ ತಮಿಳುನಾಡು ಕಡೆಗೆ ನೋಡುತ್ತಿದ್ದರು. ಈಗ ಮಹಾರಾಷ್ಟ್ರದ ಕಡೆಗೂ ತಿರುಗಿ ನೋಡುವಂತೆ ಮಾಡಿದ ಈ ನಾಗ್ಪುರದ ಹುಡುಗಿಗೆ ಒಂದು ಆಲ್ ದಿ ಬೆಸ್ಟ್ ಹಾರೈಕೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65